ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಚಿವ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ      ದಿನಾಂಕ : DATE : 21/08/2019

# ಸೀನಿಯರ್ ಸಿಟಿಜನ್ ಸಂಪುಟ

## ಬಿಎಸ್‌ವೈ ಸಂಪುಟಕ್ಕೆ 17 ಸಚಿವರ ಸೇರ್ಪಡೆ, 11 ಸಚಿವರ ವಯಸ್ಸು 60 ಪ್ಲಸ್

## ಸಿ.ಸಿ. ಪಾಟೀಲ್, ಲಕ್ಷ್ಮಣ ಸವದಿ ಅಚ್ಚರಿಯ ಆಯ್ಕೆ, ಖಾತೆ ಹಂಚಿಕೆ ಸದ್ಯಕ್ಕಿಲ್ಲ

## ಮಂತ್ರಿಗಿರಿ ವಂಚಿತರ ಅಸಮಾಧಾನ ಸ್ಫೋಟ, ಸಿಎಂ ಬಿಎಸ್‌ವೈ ಸಾಂತ್ವನ

**ವಿಕ ಸುದ್ದಿಲೋಕ** ಬೆಂಗಳೂರು

ಬರೋಬ್ಬರಿ ಇಪ್ಪತ್ತಾರು ದಿನಗಳ ಬಳಿಕ ಸಿಎಂ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರದ ಸಚಿವ ಸಂಪುಟ ವಿಸ್ತರಣೆಗೊಂಡಿದೆ. 17 ಶಾಸಕರು ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದರ ಬೆನ್ನಲ್ಲೇ ಸ್ಫೋಟಗೊಂಡ ಅಸಮಾಧಾನ ಶಮನಕ್ಕೆ ಬಿಜೆಪಿ ನಾಯಕತ್ವ ಹರಸಾಹಸ ನಡೆಸಿದೆ.

ಕುತೂಹಲಕಾರಿ ಸಂಗತಿ ಎಂದರೆ, ಸಿಎಂ ಬಿಎಸ್‌ವೈ ಸೇರಿದಂತೆ ಅವರ 18 ಸದಸ್ಯರ ಸಂಪುಟದಲ್ಲಿ 60 ವರ್ಷ ದಾಟಿದ 11 ಸಚಿವರಿದ್ದಾರೆ. ಹಾಗಾಗಿ, ಇದನ್ನು 'ಹಿರಿಯ ನಾಗರಿಕರ ಸಂಪುಟ' ಎನ್ನಬಹುದು. 40 ವರ್ಷದೊಳಗಿನವರನ್ನು ಯುವಕರು ಎಂದು ಪರಿಗಣಿಸುವುದಾದರೆ ಬಿಎಸ್‌ವೈ ಸಂಪುಟದಲ್ಲಿ ಯುವಕರೇ ಇಲ್ಲ! 48 ವರ್ಷದ ಶ್ರೀರಾಮುಲು ಸಂಪುಟದ ಕಿರಿಯ ಸದಸ್ಯರು. ರಾಜಭವನದಲ್ಲಿ ಮಂಗಳವಾರ ಬೆಳಗ್ಗೆ ನಡೆದ ಸಮಾರಂಭದಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಅವರು ಸಿಎಂ ಯಡಿಯೂರಪ್ಪ ಸಮ್ಮುಖದಲ್ಲಿ ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು.

ಸಂಪುಟದಲ್ಲಿ ಯಾರ್ಯಾರಿಗೆ ಸ್ಥಾನ ನೀಡಬೇಕೆಂಬ ಬಗ್ಗೆ ನಡೆಯುತ್ತಿದ್ದ 'ಮಂಥನ'ಕ್ಕೆ ಬಿಜೆಪಿ ಹೈಕಮಾಂಡ್ ಸೋಮವಾರ ತಡರಾತ್ರಿ ಅಂತಿಮ ರೂಪ ನೀಡಿದೆಯಾದರೂ, ಸಿಎಂ ಯಡಿಯೂರಪ್ಪ ಕೈ ಮೇಲಾಗಿರುವುದು ಸ್ಪಷ್ಟವಾಗುತ್ತಿದೆ. ಅವರು ನೀಡಿದ್ದ ಪಟ್ಟಿಯಲ್ಲಿನ ಬಹುತೇಕ ಹೆಸರುಗಳಿಗೆ ವರಿಷ್ಠರು ಒಪ್ಪಿಗೆ ನೀಡಿದ್ದಾರೆ. »05

### ಆಪರೇಷನ್ ಕಲಿಗಳಿಗಿಲ್ಲ ಸ್ಥಾನ

ಆಪರೇಷನ್ ಕಮಲ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದ ಸಿ.ಪಿ.ಯೋಗೀಶ್ವರ, ಅರವಿಂದ ಲಿಂಬಾವಳಿ, ಬಾಲಚಂದ್ರ ಜಾರಕಿಹೊಳಿ, ಎನ್. ರವಿಕುಮಾರ್‌ಗೆ ಸಂಪುಟದಲ್ಲಿ ಸ್ಥಾನ ನೀಡಿಲ್ಲ. ಈ ಪೈಕಿ ಮಲ್ಲೇಶ್ವರ ಶಾಸಕ ಡಾ. ಅಶ್ವತ್ಥನಾರಾಯಣ ಮಾತ್ರ ಸಚಿವ ಸ್ಥಾನ ಪಡೆದಿದ್ದಾರೆ.

ಗೆದ್ದದ್ದು ಬಿಎಸ್‌ವೈ »09

ಭುಗಿಲೆದ್ದ ಪ್ರತಿಭಟನೆ »07



ರಾಜಭವನದಲ್ಲಿ ನಡೆದ ಪ್ರಮಾಣ ಸ್ವೀಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜತೆ ನೂತನ ಸಚಿವರು.

### ಯಾರ್ಯಾರ ಮುನಿಸು?

ಉಮೇಶ್ ಕತ್ತಿ, ಗೂಳಿಹಟ್ಟಿ ಶೇಖರ್, ಎಸ್.ಅಂಗಾರ, ಬಾಲಚಂದ್ರ ಜಾರಕಿಹೊಳಿ, ಅಪ್ಪಚ್ಚು ರಂಜನ್, ಸಿ.ಪಿ.ಯೋಗಿಶ್ವರ್, ವಿಶ್ವನಾಥ್ ಮಾಮನಿ, ರೇಣುಕಾಚಾರ್ಯ, ರಾಮಪ್ಪ ಲಮಾಣಿ, ಮಾಡಾಳು ವಿರೂಪಾಕ್ಷಪ್ಪ, ತಿಪ್ಪಾರೆಡ್ಡಿ, ಹಾಲಾಡಿ ಶ್ರೀನಿವಾಸ್ ಶೆಟ್ಟಿ.

### ಯಡಿಯೂರಪ್ಪ ಸಂಧಾನ

ಅಸಮಾಧಾನಗೊಂಡ ಶಾಸಕರನ್ನು ತಮ್ಮ ನಿವಾಸಕ್ಕೆ ಕರೆಸಿದ ಯಡಿಯೂರಪ್ಪ ಮತ್ತು ರಾಜ್ಯ ಬಿಜೆಪಿ ಉಸ್ತುವಾರಿ ಮುರಳೀಧರ್ ರಾವ್ ಮಾತುಕತೆ ನಡೆಸಿ ಸಮಾಧಾನ ಮಾಡಿದ್ದಾರೆ. ಸದ್ಯವೇ ಮತ್ತೆ ಇವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಭರವಸೆ ನೀಡಲಾಗಿದೆ. ಜಾತಿ, ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವ ಭರವಸೆ ನೀಡಲಾಗಿದೆ.

### ಜಾತಿವಾರು ಪ್ರಾತಿನಿಧ್ಯ

| | |
|---|---|
| ಲಿಂಗಾಯತ | 8 |
| ಒಕ್ಕಲಿಗ | 3 |
| ಪರಿಶಿಷ್ಟ ಜಾತಿ | 3 |
| ಹಿಂದುಳಿದ ವರ್ಗ | 2 |
| ಪರಿಶಿಷ್ಟ ಪಂಗಡ | 1 |
| ಬ್ರಾಹ್ಮಣ | 1 |

ಎಲ್ಲಾ ಸಚಿವರಿಗೆ ನೆರೆ ಪರಿಹಾರದ ಟಾಸ್ಕ್ »04

### ಕಟೀಲ್ ಬಿಜೆಪಿ ಸಾರಥಿ



**ಬೆಂಗಳೂರು:** ಪ್ರಖರ ಹಿಂದುತ್ವವಾದಿ, ಸಂಸದ ನಳೀನ್ ಕುಮಾರ್ ಕಟೀಲ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಸಂಪುಟ ವಿಸ್ತರಣೆ ಹಾಗೂ ಖಾತೆ ಹಂಚಿಕೆ ಪ್ರಕ್ರಿಯೆಯಲ್ಲಿ ಸಿಎಂ ಯಡಿಯೂರಪ್ಪ ಮಗ್ನರಾಗಿರುವಾಗಲೇ ರಾಜ್ಯಾಧ್ಯಕ್ಷರ ನೇಮಕ ಮಾಡುವ ಮೂಲಕ ಹೈಕಮಾಂಡ್ ಅಚ್ಚರಿ ಮೂಡಿಸಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಮಂಗಳವಾರ ರಾತ್ರಿ ಈ ಆದೇಶ ಹೊರಡಿಸಿದ್ದಾರೆ.

### ಸಚಿವರು, ಪ್ರತಿನಿಧಿಸುವ ಜಿಲ್ಲೆ

- **ಜಗದೀಶ್ ಶೆಟ್ಟರ್** ಧಾರವಾಡ
- **ಗೋವಿಂದ ಕಾರಜೋಳ** ಬಾಗಲಕೋಟೆ
- **ಕೆ.ಎಸ್. ಈಶ್ವರಪ್ಪ** ಶಿವಮೊಗ್ಗ
- **ಆರ್. ಅಶೋಕ್** ಬೆಂಗಳೂರು
- **ಎಸ್. ಸುರೇಶ್ ಕುಮಾರ್** ಬೆಂಗಳೂರು
- **ಡಾ.ಸಿ.ಎನ್.ಅಶ್ವತ್ಥನಾರಾಯಣ** ಬೆಂಗಳೂರು
- **ವಿ. ಸೋಮಣ್ಣ** ಬೆಂಗಳೂರು
- **ಬಿ. ಶ್ರೀರಾಮುಲು** ಚಿತ್ರದುರ್ಗ
- **ಲಕ್ಷ್ಮಣ ಸವದಿ** ಬೆಳಗಾವಿ
- **ಶಶಿಕಲಾ ಜೊಲ್ಲೆ** ಬೆಳಗಾವಿ
- **ಸಿ.ಟಿ. ರವಿ** ಚಿಕ್ಕಮಗಳೂರು
- **ಬಸವರಾಜ್ ಬೊಮ್ಮಾಯಿ** ಹಾವೇರಿ
- **ಕೋಟ ಶ್ರೀನಿವಾಸ ಪೂಜಾರಿ** ಉಡುಪಿ
- **ಜೆ.ಸಿ. ಮಾಧುಸ್ವಾಮಿ** ತುಮಕೂರು
- **ಸಿ.ಸಿ. ಪಾಟೀಲ್** ಗದಗ
- **ಎಚ್. ನಾಗೇಶ್** ಕೋಲಾರ
- **ಪ್ರಭು ಚೌಹಾಣ್** ಬೀದರ್

# ಸೀನಿಯರ್ ಸಂಪುಟ

ಮೊದಲ ಪುಟದಿಂದ

[illegible]

ಲಕ್ಷ್ಮಣ ಸವದಿ ನಿರಾಶೆಗೊಂಡಿದ್ದಾರೆ. ಬಾಲಚಂದ್ರ ಜಾರಕಿಹೊಳಿ, ಉಮೇಶ್ ಕತ್ತಿ, ತಿಪ್ಪಾರೆಡ್ಡಿ, ಅರವಿಂದ ಲಿಂಬಾವಳಿ, ಎಸ್. ಅಂಗಾರ ಸೇರಿದಂತೆ ಅನೇಕರನ್ನು ಕೊನೆ ಹಂತದಲ್ಲಿ ಪಟ್ಟಿಯಿಂದ ಕೈ ಬಿಟ್ಟಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ಸಂಪುಟದಲ್ಲಿ 17 ಜಿಲ್ಲೆಗಳು ಪ್ರಾತಿನಿಧ್ಯದಿಂದ ವಂಚಿತವಾಗಿವೆ. ಬಿಜೆಪಿ ಸಿದ್ಧಾಂತದ ಪ್ರಯೋಗ ಶಾಲೆ ಎಂದೇ ಹೆಸರಾದ ಕರಾವಳಿಯ ಮೂರು ಜಿಲ್ಲೆಗಳಿಂದ ಒಬ್ಬ ಎಂಎಲ್‌ಎಗೂ ಪ್ರಾತಿನಿಧ್ಯ ನೀಡಿಲ್ಲ. (ಕೋಟ ಶ್ರೀನಿವಾಸ ಪೂಜಾರಿ ಪರಿಷತ್ ಸದಸ್ಯ). ಸಂಪುಟದಲ್ಲಿ ಯಡಿಯೂರಪ್ಪ ಒಳಗೊಂಡಂತೆ 8 ಲಿಂಗಾಯತ, 3 ಪರಿಶಿಷ್ಟ ಜಾತಿ, 3 ಒಕ್ಕಲಿಗ, 2 ಹಿಂದುಳಿದ ವರ್ಗ, ಪರಿಶಿಷ್ಟ ವರ್ಗ ಹಾಗೂ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ತಲಾ ಒಬ್ಬರಿಗೆ ಅವಕಾಶ ನೀಡಲಾಗಿದೆ. ಹಳೆ ಮೈಸೂರು ಭಾಗಕ್ಕೆ ಸಂಪುಟದಲ್ಲಿ ಕನಿಷ್ಠ ಪ್ರಾತಿನಿಧ್ಯ ಲಭಿಸಿದ್ದು, ಹೈದರಾಬಾದ್ ಕರ್ನಾಟಕ ಭಾಗದಿಂದ ಬೀದರ್ ಜಿಲ್ಲೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಶಶಿಕಲಾ ಜೊಲ್ಲೆ ಸಂಪುಟದಲ್ಲಿ ಸ್ಥಾನ ಪಡೆದ ಏಕಮಾತ್ರ ಮಹಿಳಾ ಸದಸ್ಯರಾಗಿದ್ದಾರೆ.